# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಚಳ್ಳಕೆರೆ, ಚಳ್ಳಕೆರೆ ತಾ, ಚಿತ್ರದುರ್ಗ ಜಿ

ಎ1 : ಖಾ.ಅ.ರ.ಶಾ.ಶು ನಿಗದಿ:74/2025-26 ದಿ:23/05/2025

## : ಜ್ಞಾಪನ :

ವಿಷಯ:-2025-26 ನೇ ಸಾಲಿನಲ್ಲಿ ಶಾಲೆಯಲ್ಲಿ ಸಂಗ್ರಹಿಸಬಹುದಾದ ಶುಲ್ಕ ನಿಗದಿಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:-1)ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಇ-1715673 ಡಿ.ಪಿ.ಐ-ಸಿ.ಪಿ.ಐ 0ಸಿ7-3(ಪಿ.ಎಲ್.ಎಂ)/5/2025 ದಿನಾಂಕ:04/04/2025.

2)ದಿನಾಂಕ 07/05/2025 ರಂದು ನಡೆದ ತಾಲ್ಲೂಕಿನ ಖಾಸಗಿ ಅನುದಾನ ರಹಿತ ಶಾಲೆಗಳ ಮುಖ್ಯ ಶಿಕ್ಷಕರ ಸಭೆಯ ನಿರ್ಣಯದಂತೆ.

3)ಶಾಲೆಯಿಂದ ಸ್ವೀಕೃತವಾದ ಪ್ರಸ್ತಾವನೆ ಮೇರೆಗೆ.

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ದಿನಾಂಕ 07/05/2025 ರಂದು ನಡೆದ ತಾಲ್ಲೂಕಿನ ಖಾಸಗಿ ಅನುದಾನರಹಿತ ಶಾಲೆಗಳ ಮುಖ್ಯ ಶಿಕ್ಷಕರ ಸಭೆಯಲ್ಲಿ 2025-26 ನೇ ಸಾಲಿನಲ್ಲಿ ಶಾಲೆಗಳಲ್ಲಿ ಸಂಗ್ರಹಿಸಬಹುದಾದ ಬೋಧನ ಶುಲ್ಕ, ಅವಧಿ ಶುಲ್ಕ, ವಿಶೇಷಾಭಿವೃದ್ಧಿ ಶುಲ್ಕ ಹಾಗೂ ಕ್ಯಾಪಿಟೇಷನ್ ಶುಲ್ಕಗಳನ್ನು ನಿಗದಿಗೊಳಿಸಿ ಇಲಾಖೆಯಿಂದ ಅನುಮೋದನೆ ಪಡೆದು, ಶಾಲೆಯಲ್ಲಿ ಪ್ರಕಟಿಸಿ ಈ ಕಚೇರಿಗೆ ವರದಿ ಮಾಡಲು ನಿರ್ಣಯಿಸಲಾಗಿರುತ್ತದೆ. ಈ ಸಂಬಂಧ ನಿಮ್ಮ ಶಾಲೆಯಲ್ಲಿ ನಿಗದಿಗೊಳಿಸಿರುವ ಶುಲ್ಕವನ್ನು ಅನುಮೋದನೆಗೊಳಿಸಲು ಕೋರಿದ್ದು, ನೀವು ಸಲ್ಲಿಸಿರುವ ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ ಈ ಕೆಳಕಂಡಂತೆ ಅನುಮೋದನೆ ನೀಡಿದೆ. ಅದರಂತೆ ನಿಯಮಾನುಸಾರ ಶುಲ್ಕ ಸಂಗ್ರಹಿಸಲು ಹಾಗೂ ಶುಲ್ಕದ ಮಾಹಿತಿಯನ್ನು ಸಾರ್ವಜನಿಕರು/ಪೋಷಕರಿಗೆ ಗೋಚರಿಸುವಂತೆ ಶಾಲೆಯ ಪ್ರಕಟಣಾಫಲಕದಲ್ಲಿ ಪ್ರಕಟಿಸಿ ಈ ಕಚೇರಿಗೆ ವರದಿ ಮಾಡಲು ಸೂಚಿಸಿದೆ. ತಪ್ಪಿದಲ್ಲಿ ನಿಮ್ಮ ಶಾಲೆಯ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲು ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡಲಾಗುವುದೆಂದು ಸೂಚಿಸಿದೆ. ಅನುಮೋದಿಸಿದ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕ ಪಡೆದ ಕುರಿತಾಗಿ ದೂರು ದಾಖಲಾದಲ್ಲಿ ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರದ ಮುಂದೆ ಮಂಡಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು.

### ಅನುಮೋದಿಸಲಾದ ಶುಲ್ಕದ ವಿವರ

| ತರಗತಿ | 2025-26 ನೇ ಸಾಲಿಗೆ ಅನುಮೋದಿಸಲಾದ ಬೋಧನಾ ಶುಲ್ಕ | 2025-26 ನೇ ಸಾಲಿಗೆ ಅನುಮೋದಿಸಲಾದ ಅವಧಿ ಶುಲ್ಕ (6 ರಿಂದ 7 ನೇ ತರಗತಿವರಗೆ) | ವಿಶೇಷಾಭಿವೃದ್ಧಿ ಶುಲ್ಕ (01 ರಿಂದ 10 ನೇ ತರಗತಿಗೆ) | ಷರಾ |
|---|---|---|---|---|
| ಪೂರ್ವ ಪ್ರಾಥಮಿಕ | ರೂ. 20946/- | ಅವಧಿ ಶುಲ್ಕ ಇರುವುದಿಲ್ಲ | ವಿಶೇಷಾಭಿವೃದ್ಧಿ ಶುಲ್ಕ ಇರುವುದಿಲ್ಲ | |
| 01 ರಿಂದ 07 ನೇ ತರಗತಿ | ರೂ. 27405/- | ರೂ. | ರೂ. | |
| 8 ರಿಂದ 10 ನೇ ತರಗತಿ | ರೂ. 40217/- | ರೂ. | ರೂ. | |

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಶಾಲಾ ಶಿಕ್ಷಣ ಇಲಾಖೆ ಚಳ್ಳಕೆರೆ

ಗೆ,
ಕಾರ್ಯದರ್ಶಿ / ಮುಖ್ಯೋಪಾಧ್ಯಾಯರು,
ವೇದಾವತಿ ಆಂಗ್ಲ ಮಾಧ್ಯಮ ಶಾಲೆ, ಪರಶುರಾಂಪುರ

ಪ್ರತಿ: 1)ಮಾನ್ಯ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಚಿತ್ರದುರ್ಗ ತಾಲ್ಲೂಕು ಚಿತ್ರದುರ್ಗ ಜಿ॥.
2)ಕಚೇರಿ ಪ್ರತಿ.